ಬೆಂಗಳೂರು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಸ॥ 1906—07ನೆ ಇಸವಿ ಮಿ॥ ಅರ್ಜೀ ನಂಬರ್ 680.

ಬೆಂಗಳೂರಲ್ಲಿದ್ದ ಮದ್ರಾಸ್ ರೈಲ್ವೆ ಜೀಫ್ ಗೂಡ್ಸ್ ಕ್ಲಾರ್ಕ್ ಮೃತಪಟ್ಟ ಎಂ. ಎ. ಶಿಂಗಪೆರಮಾಳ್ಳಿಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬ್ಯಾಂಕ್ಸು ಹೆಡ್ ಸರಾಫ್ ಎಂ. ಎ. ಶ್ರೀನಿವಾಸೈಯ್ಯಂಗಾರ್ರು, ಮೃತಪಟ್ಟ ಸದರೀ ಶಿಂಗಪೆರುಮಾಳ್ಳಿಯ್ಯಂಗಾರ್ರಿಗೆ ಖಾಸಾ ಮಗನಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಸ್ಥಳದ ಬೆಂಗಳೂರು ಬ್ಯಾಂಕ್ಸು ಹೆಡ್ ಸರಾಫ್ ಎಂ. ಎ. ಶ್ರೀನಿವಾಸೈಯ್ಯಂಗಾರ್ರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ, ಶಿಂಗ ಪೆರುಮಾಳ್ಳಿಯ್ಯಂಗಾರ್ರ ಜಿಂದಗಿ ಬಗ್ಯಾಗಿ ಒರತಕ್ಕ 3,900 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಎಂ. ಎ. ಶ್ರೀನಿವಾಸೈಯ್ಯಂಗಾರ್ರ ಅರ್ಜಿಯನ್ನು ಸ॥ 1907ನೆ ಇಸವಿ ಜುಲ್ಯ ತಿಂಗಳು 12ನೆ ತಾರೀಖು ಶುಕ್ರವಾರ ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಶಿಂಗಪೆರುಮಾಳ್ಳಿಯ್ಯಂಗಾರ್ರ ಆಸ್ತಿಗ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇದೆ.

ಸ॥ 1907ನೆ ಇಸವಿ ಜೂ॥ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟ್ ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಜೆ. ಹೆಚ್. ಖಾಖಾ,
ಸಬಾರ್ಡಿನೇಟ್ ಜಡ್ಜ್.

ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್.

ನೋಟಿಸ್.

ತಾರೀಖು 28ನೇ ಮೇ 1907.

ಬೆಂಗಳೂರಲ್ಲಿರುವ ಮೈಸೂರು ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ಸಿನ ಸೂಪರಿಟೆಂಡೆಂಟರವರು, ಖಾಯಂ ತಲಬಿನ ಮೇಲೆ ಯಾ ಪೀಸ್ ವರಿ ನ ಮೇಲೆ, ಪ್ರೂಫ್ ರೀಡರ್‌ಗಳಾಗಿಯೂ, ಕಂಪಾಜಿಟರ್‌ಗಳಾಗಿಯೂ ನೌಕರಿಗೋಸ್ಕರ, ಬೆಂಗಳೂರು ಗವರ್ನಮೆಂಟ್ ಪ್ರೆಸ್ಸಿನಲ್ಲಿ ಕೆಲಸವನ್ನು ಕಲಿಯುವುದಕ್ಕೆ, ಮೈಸೂರು ದೇಶೀಯ ಜನಗಳಿಂದ ಅಪ್ಲಿಕೇಷ್ನ ಯಾನೆ ದರಖಾಸ್ತುಗಳನ್ನು 1907ನೇ ಜೂ॥ 30ನೇ ತಾರೀಖಿನವರಿಗೆ, ತೆಗೆದುಕೊಳ್ಳುತ್ತಾರೆ.

ದರಖಾಸ್ತುದಾರರು ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ಮತ್ತು ಗೆಜೆಟೆಡ್ ಆಫಿಸರರಿಂದಾಗಲಿ ಯಾ ಮಾತುಬರಹುದಾದ ಇತರ ದೊಡ್ಡ ಮನುಷ್ಯರಿಂದಾಗಲಿ ಪಡೆದ ಯೋಗ್ಯತಾ ಪತ್ರಿಕೆಯೊಡನೆ ದರಖಾಸ್ತುಗಳನ್ನು ಕಳುಹಿಸತಕ್ಕದ್ದು.

ದರಖಾಸ್ತುದಾರರಲ್ಲಿ ಕ್ಷುಲ್ಲಪ್ರವಾಗಿ ಕೆಲವರು ಚುನಾಯಿಸಲ್ಪಡುವರು. ಇವರು ಪ್ರಥಮತಃ ಆರು ತಿಂಗಳುವರಿಗೆ ಪ್ರೂಫ್ ಬ್ರಾಂಚಿನಲ್ಲಿ ಕಾಪೀ ಹೋಲ್ಡರ್‌ಗಳಾಗಿ ಯಾ ರೀಡರ್‌ಗಳಾಗಿ ನೇಮಿಸಲ್ಪಡುವರು. ತರುವಾಯ, ಎರಡೂವರೆ ವರುಷಗಳ ವರಿವಿಗೆ, ಯಾವ ಕೆಲಸಕ್ಕೆ ಅರ್ಹರಾಗುವರೋ ಆ ಇಲಾಖೆಗೆ ದಾಖಲ್ಮಾಡಲ್ಪಡುವರು. ಪ್ರೂಫ್ ಬ್ರಾಂಚಿಗೆ ತಕ್ಕವರಾಗಿಯೂ ಅಲ್ಲಿ ಕೆಲ ಸವಾಡಲಪೇಕ್ಷೆಯುಳ್ಳವರಾಗಿಯೂ ಇರುವ ದರಖಾಸ್ತುದಾರರು ರೀಡಿಂಗ್ ಕೆಲಸಕ್ಕೆ ತಕ್ಕವರೆಂದು ಎಣಿಸಲಕ್ಕೆ ಕನಿಷ್ಠಪಕ್ಷ ಒಂದು ವರುಷವಾದರೂ ಕಂಪಾಜಿಟರ್‌ರಾಗಿ ಕೆಲಸ ಮಾಡತಕ್ಕದ್ದು.

ಈ ಎರಡೂವರೆ ವರ್ಷಗಳಲ್ಲಿ ಯೋಗ್ಯರಾದ ರೀಡರ್‌ಗಳು ಇದರಿಂದ ನಮೂದಿಸುವಂತೆ ತಲಬನ್ನು ಪಡೆಯುವರು.

ಮೊದಲು ಆರು ತಿಂಗಳುಗಳಲ್ಲಿ ಮಾಹೇಯಾನಾ 3 ರೂಪಾಯಿಗಳು, ಎರಡನೇ ಆರು ತಿಂಗಳುಗಳಲ್ಲಿ 4 ರೂಪಾಯಿಗಳು ಮೂರನೇ ಆರು ತಿಂಗಳುಗಳಲ್ಲಿ 5ರೂಪಾಯಿಗಳು ಆಖೈರ್ ಹನ್ನೆರಡು ತಿಂಗಳಲ್ಲಿ 6 ರೂಪಾಯಿಗಳು. ಕಂಪಾಜಿಟರ್‌ಗಳು ಮೇಲ್ಕಂಡ ಕಾಲದಲ್ಲಿ ಕ್ರಮವಾಗಿ 2—4—0, 3—0—0 3—12—0 ಮತ್ತು 4—10—0 ವೇರೆಗೆ ತಲಬನ್ನು ಪಡೆಯುವರು. ಮೇಲೆ ಹೇಳಲ್ಪಟ್ಟ ಕಾಲದಲ್ಲಿ ಎಲಿಮೆಂಟರಿ ಆಫೀಸ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮತ್ತು ಹೈಪ್ಟಿಕರವಾದ ನಡತೆಯುಳ್ಳವರು ಮಾತ್ರ ಕಾಲಕಾಲಕ್ಕೆ ಬಡ್ತಿಗಳನ್ನು ಹೊಂದುವರು. ಎರಡಾವೃತ್ತಿ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗದವರು ಕೆಲಸದಿಂದ ನಿವೃತ್ತಿ ಮಾಡಲ್ಪಡುವರು.

ಮೂರು ವರುಷಗಳ ನೌಕರಿಯು ಪೂರ್ತಿಯಾದಮೇಲೆ ಯಾವ ಕೆಲಸದಲ್ಲಿ ಯೋಗ್ಯತೆಯನ್ನು ಪಡೆದಿರುವರೋ, ಅಂಥಾ ಕೆಲಸವುಳ್ಳ ಬ್ರಾಂಚಿನಲ್ಲಿ ನಿಯಮಿಸಲ್ಪಡುವರು, ಅನಂತರ ಅವರ ನೌಕರಿಯು ಗವರ್ನಮೆಂಟ್ ರೆಗ್ಯುಲೇಷನಿಗನುಸಾರವಾಗಿ ಪೆರ್ಮನೆಂಟ್ ತಕ್ಕದ್ದೆಂದು ಎಣಿಸಲ್ಪಡುವುದು. ಮತ್ತು ಪೀಸ್ ವರ್ಕ್ ಕಂಪಾಜಿಟರ್‌ಗಳ ವಿಷಯದಲ್ಲಿ ಅವರ ಕರ್ತವ್ಯನುಗುಣವಾಗಿ ಇತರ ವಿಷಯದಲ್ಲಿ ಆಗುವ ಕಾಲಾನುಸಾರವಾದ ರೂಲ್‌ಗಳ ಪ್ರಕಾರ ಸಂಬಳವು ಆಗುವುದು.

ಪ್ರೊಬೇಷ್ನ ಕಾಲವು ಪೂರೈಸಿದ ನಂತರ ಸೂಪರಿಟೆಂಡೆಂಟರವರ ಮರ್ಜಿಯಾತಿಗೊಳಪಟ್ಟು, ಗವರ್ನಮೆಂಟ್ ಪ್ರೆಸ್ಸಿನಲ್ಲಿ ಮೂರು ವರುಷಗಳ ಕಾಲ ನೌಕರಿ ಮಾಡುತ್ತೇವೆಂಬದಾಗಿ ಕರಾರ್‌ಬರೆದು ಸೈನ್ ಮಾಡಿ ಕೊಡತಕ್ಕದ್ದು; ಅಥವಾ ಪ್ರೊಬೇಷ್ನ ಕಾಲದಲ್ಲಿ ಪಡೆದ ಹಣವನ್ನು ವಾಪಸ್ ಕೊಡಬೇಕು.

ದರಖಾಸ್ತುದಾರರು ತಮಗೆ ಕೆಲಸದಲ್ಲಿ ತಕ್ಕ ಮಟ್ಟಿಗೆ ಅನುಭವವುಂಟಾದಕೂಡ್ಲೆ, ಬೆಂಗಳೂರು ಸೆಂಟರ್‌ನಲ್ಲಿ ಪ್ರತಿವರುಷ ನವಂಬರ್ ತಿಂಗಳಲ್ಲಿ ನಡೆಯುವ ಮದ್ರಾಸ್ ಗವರ್ನಮೆಂಟ್ ಟೆಕ್ನಿಕಲ್ ಪರೀಕ್ಷೆಗೆ ಹೋಗುವ ಉದ್ದಿಶ್ಯ, ಪ್ರಾತಃಕಾಲ ಸಾಯಂಕಾಲದ ಕ್ಲಾಸಿಗೆ ಫೀ ಇಲ್ಲದೇನೆ ಹಾಜರಾಗಬಹುದು. ಈ ಪರೀಕ್ಷೆಯಲ್ಲಿ ಯೋಗ್ಯತಾಪತ್ರಿಕೆಯನ್ನು ಪಡೆದವರಿಗೆ ಪ್ರೆಸ್ಸಿನಲ್ಲಿ ಖಾಲಿಯಾಗುವ ದೊಡ್ಡ ನೌಕರಿಯು ಸೂಪರಿಟೆಂಡೆಂಟರವರ ಅನುಮತಿಮೇರೆಗೆ ಕೊಡಲ್ಪಡುವುದು.

ಸಿ. ಎಚ್. ಏಟ್ಸ್,
ಗವರ್ನಮೆಂಟ್ ಪ್ರೆಸ್ ಸೂಪರಿಟೆಂಡೆಂಟ್.